SSLC Social Science question paper with key answer 1

## 10ನೇ ತರಗತಿ, ಸಮಾಜ ವಿಜ್ಞಾನ–85ಕೆ, ಗರಿಷ್ಠ ಅಂಕಗಳು: 80 ಅವಧಿ: 3ಗಂಟೆ, 15 ನಿಮಿಷ

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ. 8x1=8**

1. ಮೊದಲನೇ ಆಂಗ್ಲೋ–ಮರಾಠ ಯುದ್ಧ ಈ ಒಪ್ಪಂದದೊಂದಿಗೆ ಕೊನೆಗೊಂಡಿತು,
   ಎ) ಸಾಲ್‌ಬಾಯ್ ಒಪ್ಪಂದ ಬಿ) ಲಾಹೋರ್ ಒಪ್ಪಂದ
   ಸಿ) ಬೆಸ್ಸಿನ್ ಒಪ್ಪಂದ ಡಿ) ಮದ್ರಾಸ್ ಒಪ್ಪಂದ
2. ಹಿಟ್ಲರನು ಗಲಭೆಗಳನ್ನುಂಟು ಮಾಡಿ ಜನರಲ್ಲಿ ಭೀತಿ ಹುಟ್ಟಿಸಲು ರಚಿಸಿದ್ದ ಕ್ರೌರ್ಯಪಡೆ
   ಎ) ಕೆಂಪು ಅಂಗಿದಳ ಬಿ) ಕಪ್ಪು ಅಂಗಿದಳ
   ಸಿ) ಬೂದು ಅಂಗಿದಳ ಡಿ) ಬಿಳಿ ಅಂಗಿದಳ
3. ಡಾ. ಡಿ. ಎಂ. ನಂಜುಂಡಪ್ಪ ಸಮಿತಿ ಸ್ಥಾಪನೆಯ ಉದ್ದೇಶ
   ಎ) ಕೋಮುವಾದವನ್ನು ತಡೆಯುವುದು ಬಿ) ಪ್ರಾದೇಶಿಕವಾದವನ್ನು ತಡೆಯುವುದು
   ಸಿ) ಅನಕ್ಷರತೆಯನ್ನು ತಡೆಯುವುದು ಡಿ) ಭ್ರಷ್ಟಾಚಾರವನ್ನು ತಡೆಯುವುದು
4. ಮಕ್ಕಳ ದುಡಿಮೆಯನ್ನು ನಿಷೇಧಿಸಿದ ಸಂವಿಧಾನದ ವಿಧಿ
   ಎ) 17ನೇ ವಿಧಿ ಬಿ) 24ನೇ ವಿಧಿ ಸಿ) 21ಎ ವಿಧಿ ಡಿ) 16ನೇ ವಿಧಿ
5. ಕರ್ನಾಟಕದಲ್ಲಿ ಅಪ್ಪಿಕೋ ಚಳವಳಿ ನೇತೃತ್ವ ವಹಿಸಿದ್ದವರು,
   ಎ) ಮೇಧಾ ಪಾಟ್ಕರ್ ಬಿ) ಡಾ॥ ಶಿವರಾಮ ಕಾರಂತ
   ಸಿ) ಸುಂದರಲಾಲ್ ಬಹುಗುಣ ಡಿ) ಸಲ್ಯಾನಿ ಗ್ರಾಮದ ರೈತರು
6. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಉತ್ತರ ಪ್ರದೇಶದಲ್ಲಿ ಬೀಳುವ ಪರಿಸರಣ ಮಳೆಯನ್ನು ಹೀರೆ ಕರೆಯುವರು,
   ಎ) ಮಾವಿನ ಹೊಯ್ಲು ಬಿ) ಆಂಡೀಸ್
   ಸಿ) ಕಾಫಿ ತುಂತುರು ಡಿ) ಕಾಲಬೈಸಾಕಿ
7. ಭಾರತದ ಹಸಿರು ಕ್ರಾಂತಿಯ ಪಿತಾಮಹ
   ಎ) ವರ್ಗೀಸ್ ಕುರಿಯನ್ ಬಿ) ಜವಾಹರಲಾಲ್ ನೆಹರು
   ಸಿ) ಎಂ. ಎಸ್. ಸ್ವಾಮಿನಾಥನ್ ಡಿ) ಸರ್ ಎಂ ವಿಶ್ವೇಶ್ವರಯ್ಯ
8. ಗ್ರಾಹಕ ರಕ್ಷಣಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಕಟ್ಟಬೇಕಾದ ಶುಲ್ಕ ಅಥವಾ ನೊಂದಾವಣಿ ಶುಲ್ಕ
   ಎ) ಸರಕು ಅಥವಾ ಸೇವೆಯ ಒಟ್ಟು ಶೇಕಡ 15 ಭಾಗದಷ್ಟು ಬಿ) ಸರಕು ಅಥವಾ ಸೇವೆಯ ಒಟ್ಟು ಶೇಕಡ 10 ಭಾಗದಷ್ಟು
   ಸಿ) ಯಾವುದೇ ಹಣ ಪಾವತಿಸುವಂತಿಲ್ಲ ಡಿ) ಕನಿಷ್ಟ 100ರೂ ಶುಲ್ಕ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8x1= 8**

9. ಹೊಲೊಕಾಸ್ಟ್ ಎಂದರೇನು?
10. ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಏಕೆ ಮರಳಿದನು?
11. ಭಾರತ ನಿಶ್ಶಸ್ತ್ರೀಕರಣವನ್ನು ಉತ್ತೇಜಿಸುತ್ತದೆ. ಏಕೆ?
12. ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ (1994) ಯನ್ನು ಏಕೆ ಜಾರಿಗೆ ತರಲಾಗಿದೆ?
13. ಮಾವಿನ ಹೊಯ್ಲು ಎಂದರೇನು?
14. ಇಂದು ಅಭ್ರಕದ ರಫ್ತು ಕಡಿಮೆಯಾಗಿದೆ. ಏಕೆ?
15. ವಿಕೇಂದ್ರೀಕರಣ ಎಂದರೇನು?
16. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಬ್ಯಾಂಕ್ ಖಾತೆ ಯಾವುದು?

**III. ಈ ಪ್ರತಿಯೊಂದು ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** 8 x 2 = 16

17. ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ರಾಜ್ಯಗಳು ಅನುಸರಿಸಬೇಕಾದ ನಿಬಂಧನೆಗಳೇನು?
18. ಭಾರತ ಒಕ್ಕೂಟಕ್ಕೆ ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನ ವಿಶಿಷ್ಟವಾಗಿದೆ. ಹೇಗೆ?.
19. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು? ಅಥವಾ
    ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಸಮಸ್ಯೆಗಳಾವುವು?
20. ಅಸಂಘಟಿತ ವಲಯದ ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿ ಮಾಡಿ. ಅಥವಾ
    ಪ್ರಮುಖ ಪರಿಸರ ಚಳುವಳಿಗಳನ್ನು ಪಟ್ಟಿ ಮಾಡಿ.
21. ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳನ್ನು ವ್ಯತ್ಯಸಿಸಿ.
22. ಭಾರತದಲ್ಲಿ ಹತ್ತಿ ಬೆಳೆಯಲು ಅವಶ್ಯಕ ಪೂರಕ ಅಂಶಗಳಾವುವು?
23. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನು?
24. ಬಳಕೆದಾರರ ಶೋಷಣೆಗೆ ಕಾರಣಗಳು ಯಾವುವು?

**IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 3 ರಿಂದ 6 ವಾಕ್ಯಗಳಲ್ಲಿ ಉತ್ತರಿಸಿ.** 9 x 3 = 27

25. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳೇನು?
26. ಭಾರತೀಯ ತಾತ್ವಿಕತೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ಅನಿಬೆಸೆಂಟ್‌ರವರು ಅಪಾರ ಕೊಡುಗೆಗಳನ್ನು ನೀಡಿದ್ದಾರೆ. ದೃಢೀಕರಿಸಿ.
27. ಚಿಕ್ಕದೇವರಾಜ ಒಡೆಯರ್ ಅವರ ಸಾಧನೆಗಳನ್ನು ವಿವರಿಸಿ ಅಥವಾ
    ಬ್ರಿಟಿಷ್ ಶಿಕ್ಷಣದಿಂದ ಭಾರತೀಯರ ಮೇಲೆ ಆದ ಪ್ರಮುಖ ಪರಿಣಾಮಗಳನ್ನು ವಿವರಿಸಿ.
28. ಪ್ರಪಂಚದ ಮಾನವರ ಆರೋಗ್ಯ ಸುಧಾರಣೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪಾತ್ರ ಪ್ರಮುಖವಾದುದು. ದೃಢೀಕರಿಸಿ.
29. ಭಾರತವು ಅಸ್ಪೃಶ್ಯತೆಯ ನಿವಾರಣೆಗೆ ತೆಗೆದುಕೊಂಡಿರುವ ಕ್ರಮಗಳಾವುವು?
30. ಪ್ರವಾಹಗಳಿಂದುಂಟಾಗುವ ಪರಿಣಾಮಗಳಾವುವು? ಅಥವಾ
    ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
31. ಮಣ್ಣಿನ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.
32. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಪ್ರಮುಖವಾದುದು. ಸಮರ್ಥಿಸಿ. ಅಥವಾ
    ಕೇಂದ್ರ ಸರ್ಕಾರವು ತೆರಿಗೆಯೇತರ ಮೂಲಗಳಿಂದಲೂ ಆದಾಯ ಸಂಗ್ರಹಿಸುತ್ತದೆ. ದೃಢೀಕರಿಸಿ.
33. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರ ಪ್ರಮುಖವಾದುದು. ಸಮರ್ಥಿಸಿ. ಅಥವಾ
    ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಯ ವ್ಯತ್ಯಾಸಗಳಾವುವು?

**V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** 4 x 4 = 16

34. "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು."ಸ್ಪಷ್ಟೀಕರಿಸಿ ಅಥವಾ
    ಜವಾಹರಲಾಲ್ ನೆಹರು ಅವರು ನವಭಾರತದ ಶಿಲ್ಪಿ. ವಿಶ್ಲೇಷಿಸಿ.
35. ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿವರಿಸಿ.
36. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಂಡಿರುವ ಕ್ರಮಗಳೇನು?
37. ಭಾರತದಲ್ಲಿ ಅರಣ್ಯಗಳ ಸಂರಕ್ಷಣಾ ಕ್ರಮಗಳಾವುವು?

**VI. 38. ಭಾರತದ ಅಂದವಾದ ನಕ್ಷೆ ಬರೆದು ಇವುಗಳನ್ನು ಗುರುತಿಸಿ.** 1 + 4 = 5

ಎ) ಕರ್ಕಾಟಕ ಸಂಕ್ರಾಂತಿ ವೃತ್ತ ಬಿ) ಹಿರಾಕುಡ್ ಸಿ) ಕೈಗಾ ಡಿ) ಕಾಂಡ್ಲಾ